# 5 ‘A’s ಗಳ  ಪರಿಕಲ್ಪನೆ



www.powerpointdesigns.net

# ಆಸ್ತಿ (ಸ್ವತ್ತು) (ASSET)

ಭೂಮಿ, ಪ್ರಾಣಿಗಳು, ಕೃಷಿ ಉಪಕರಣಗಳು, ಪಂಪು, ಟ್ರ್ಯಾಕ್ಟರ್, ಕೊಳ, ಬಾವಿಗಳು, ನಗದು, ಒಡವೆಗಳು, ಬ್ಯಾಂಕ್ ಬ್ಯಾಲೆನ್ಸ್, ಮನೆಯಲ್ಲಿ ಸಂಗ್ರಹಿಸಿದ ಧಾನ್ಯ, ಬೀಜ ಮತ್ತು ಆಹಾರ ಪದಾರ್ಥಗಳು.

ಇವುಗಳಿಂದಾಗಿ ವ್ಯಾಪಾರಸ್ಥರು, ಲೇವಾದೇವಿಗಾರರು, ಬ್ಯಾಂಕುಗಳು, ಮುಂತಾದ ಕಡೆ ಉತ್ತಮ ಬಾಂಧವ್ಯ, ಅವರ ಮೆಚ್ಚುಗೆ (ಹಾರೈಕೆ) ಪಡೆಯಲು ಹಾಗೂ ಬಹಳ ನಿಖರವಾಗಿ ಹೇಳಬೇಕೆಂದರೆ ಒಂದು ಆರ್ಥಿಕ ನಿರ್ಧಾರ ಮಾಡಲು ಅಗತ್ಯವಾದ ಮೂಲ ತಳಹದಿಯಾಗಿರುತ್ತದೆ.

ಇದೇ ರೀತಿ ಕುಟುಂಬದ ಗಾತ್ರ ಕೂಡಾ ಒಂದು ಆಸ್ತಿಯೇ, ಹಾಗೆಯೇ ಅದು ಸಾಲವೂ ಹೌದು. ಮಕ್ಕಳು ಮತ್ತು ಹಿರಿಯರನ್ನು ಕುಟುಂಬದ ಆರ್ಥಿಕತೆಯ ಅಭಿವೃದ್ಧಿಯತ್ತ ಸೆಳೆಯಬೇಕಾಗಿರುತ್ತದೆ ಜೊತೆಗೇ ಯುವಕರೂ ಸಹ ಅದಕ್ಕೆ ವಂತಿಗೆ ನೀಡುವಂತೆ ಪ್ರೋತ್ಸಾಹಿಸಬೇಕಾಗುತ್ತದೆ.

ಒಟ್ಟಾರೆಯಾಗಿ ಒಂದು ಆಸ್ತಿಯ ಗುಣವೆಂದರೆ ಒಂದು ಕುಟುಂಬದ ಕಷ್ಟಗಳನ್ನು ಎದುರಿಸುವ ಮತ್ತು ಅದರ ಧಾರಣಾ ಶಕ್ತಿ ಆಗಿರುತ್ತದೆ.

# ಲಭ್ಯತೆ (ACCESS)

- ಮೂಲಭೂತ ಸೌಕರ್ಯಗಳ ಅಭಿವೃದ್ಧಿಯನ್ನೇ ನಾವು ಯಾವಾಗಲೂ ಅಭಿವೃದ್ಧಿಯ ಅಂತಿಮ ಘಟ್ಟವೆಂದು ನಿರ್ಧರಿಸುತ್ತೇವೆ, ಆದರೆ ಇದೇ ಒಟ್ಟಾರೆ ನಿರ್ಣಾಯಕ ಅಂಶವಲ್ಲ. ಲಭ್ಯತೆಯು ಕುಟುಂಬವು ತನ್ನ ಆಸ್ತಿಗಳನ್ನು ನಿರ್ವಹಿಸುವಲ್ಲಿ ಕೈಗೊಳ್ಳುವ ನಿರ್ಧಾರಗಳು ಮತ್ತು ಕುಟುಂಬದ ಯಜಮಾನಿಕೆಯ ಗುಣಮಟ್ಟ ಎರಡರ ಮೇಲೂ ಪರಿಣಾಮ ಬೀರುವುದಾಗಿರುತ್ತದೆ.

- ವಾಣಿಜ್ಯ ಆಧಾರಿತ ಕುಟುಂಬಗಳಿಗೆ ಮಾರುಕಟ್ಟೆಯ ಬೆಲೆಗಳು, ಬೇಡಿಕೆ, ಋತುಮಾನ, ಉತ್ಪಾದನೆಯ ಗುಣಮಟ್ಟ ಮುಂತಾದವುಗಳ ಕುರಿತಂತೆ ಉತ್ತಮ ನಿರ್ಧಾರಗಳನ್ನು ಕೈಗೊಳ್ಳಲು ಮಾಹಿತಿ ಲಭ್ಯತೆಯು ಬಹಳ ಮುಖ್ಯವಾಗಿರುತ್ತದೆ.

- ಹಾಗೆಯೇ, ಹೂಡಿಕೆದಾರರು, ಮಾರಾಟಗಾರರಿಗೆ ತಮ್ಮ ಆರ್ಥಿಕ ಚಟುವಟಿಕೆಯನ್ನು ಸುಸ್ಥಿರವಾಗಿಟ್ಟುಕೊಳ್ಳಲು ಭೌತಿಕ, ಸಾಮಾಜಿಕ ಮತ್ತು ಹಣಕಾಸಿನ ಲಭ್ಯತೆಯ ಅಂಶಗಳು ಬಹ ಮುಖ್ಯವಾಗಿರುತ್ತದೆ.

# ಲಭ್ಯತೆ (ACCESS)

- ಕುಟುಂಬಗಳಿಗೆ ತಮ್ಮ ಆರ್ಥಿಕ ಮತ್ತು ಜೀವನೋಪಾಯ ಚಟುವಟಿಕೆಗಳಿಗೆ ಅಗತ್ಯ ಬೆಂಬಲ ಪಡೆಯಲು ಸರ್ಕಾರದ ಏಜೆನ್ಸಿಗಳು, ವಾಣಿಜ್ಯ ಬ್ಯಾಂಕುಗಳಿಗೆ ಪ್ರವೇಶಾಧಿಕಾರದ ಲಭ್ಯತೆಯು ಬಹಳ ಮುಖ್ಯವಾಗಿರುತ್ತದೆ.
- ಇದೇ ರೀತಿಯಾಗಿ ಸಾಮಾಜಿಕವಾಗಿ ಹಿಂದುಳಿದ ಮತ್ತು ಬಡತನದ ಅಂಚಿನಲ್ಲಿರುವ ಜನರಿಗೆ ಸಾರ್ವಜನಿಕ ಹಾಗೂ ಸಾಮೂಹಿಕ ಸಂಪನ್ಮೂಲಗಳಾದ ಕಾಲುವೆಗಳು, ಕೆರೆಗಳು, ನದಿಗಳು, ಅರಣ್ಯಗಳು, ಬಂಜರು ಭೂಮಿಗಳು, ಗೋಮಾಳ ಭೂಮಿಗಳು ಇತ್ಯಾದಿಗಳಿಗೆ ಕಾನೂಬದ್ಧವಾದ ಪ್ರವೇಶಾಧಿಕಾರದ ಲಭ್ಯತೆಯು ಬಹಳ ಪ್ರಮುಖ ವಿಚಾರವಾಗಿರುತ್ತದೆ.

# ಭರವಸೆ (ASSURANCE)

ಭರವಸೆ ಎಂದರೆ ಕಡು ಬಡ ಕುಟುಂಬಗಳು ಹೊರಗಿನ ವ್ಯಕ್ತಿ/ಏಜೆನ್ಸಿಗಳು/ಪರಿಸರದಿಂದ ಪಡೆದುಕೊಳ್ಳಬಹುದಾದ ಅಗತ್ಯ ಬೆಂಬಲ, ಕ್ಲಿಷ್ಟ ಸೇವೆಗಳೂ ಸಹ ಆಗಿರುತ್ತವೆ. ಆದರೆ ಅವರ ದಯನೀಯ ಸ್ಥಿತಿಯಿಂದಾಗಿ ಇವುಗಳನ್ನು ಪಡೆಯುವುದು ಅನಿವಾರ್ಯವಾದರೂ ಕಷ್ಟದಾಯಕವಾಗಿರುತ್ತದೆ.

ಬಡತನ ಹೊಂದಿದ ಬಡವರಿಗೆ ತೀವ್ರ ಸೋಲುಂಟಾದಾಗ ಅದನ್ನು ತಡೆದುಕೊಳ್ಳುವ ಶಕ್ತಿ ಇಲ್ಲದಿರುವುದರಿಂದ ಅದರ ಫಲಿತಾಂಶದ ತೀವ್ರತೆ ಕೂಡಾ ಹೆಚ್ಚಾಗಿಯೇ ಇರುತ್ತದೆ. ಆದ್ದರಿಂದ ಹಿಂದಕ್ಕೆ ಬರುವ ಪ್ರತಿಫಲ ನಿರೀಕ್ಷಿತ ಮಟ್ಟಕ್ಕಿಂತ ಕಡಿಮೆಯಾಗಿ ಕುಟುಂಬಕ್ಕೆ ಸೋಲುಂಟಾದಾಗ ಅದನ್ನು ಎದುರಿಸಿ ನಿಲ್ಲುವ ಶಕ್ತಿಯ ಭರವಸೆ ಬೇಕಾಗುತ್ತದೆ.

# ಸಾಮರ್ಥ್ಯ (ABILITY)

ಇದು ಒಬ್ಬ ವ್ಯಕ್ತಿಯ ಜೀವನೋಪಾಯ ಉತ್ಪನ್ನಗಳ ಪ್ರಕ್ರಿಯೆಗಳಿಂದ ನಿರೀಕ್ಷಿತ ಫಲಿತಾಂಶಗಳನ್ನು ಯೋಜಿಸುವ ಕೌಶಲ್ಯ (ಕ್ರಿಯೆ)ಯನ್ನು ವಿಶ್ಲೇಶಿಸುವ, ಜ್ಞಾನವನ್ನು ಅರ್ಥ ಮಾಡಿಕೊಳ್ಳುವ ಮೂಲ ಸಾಮರ್ಥ್ಯದ ಬಗ್ಗೆ ಹೇಳುತ್ತದೆ.

# ಸ್ವಭಾವ (ವರ್ತನೆ) (ATTITUDE)

ಇದು ಹೊಸ ಮತ್ತು ಅಪರೂಪದ ವಸ್ತು ಮತ್ತು ಜನರ ಜೊತೆಗೆ ಸಂಬಂಧ ಬೆಳೆಸುವ ವಿಷಯದಲ್ಲಿ ವಿಶೇಷ ಮಹತ್ವದ ಸ್ವಭಾವಗಳನ್ನು ಕುರಿತದ್ದಾಗಿರುತ್ತದೆ. ಅದೇ ರೀತಿ ಸಂಕಷ್ಟಗಳಿಗೆ ಸಂಬಂಧಿಸಿದ ಸ್ವಭಾವಗಳು, ಬಿಡುವಿಗೆ ಸಂಬಂಧಿಸಿದ ಸ್ವಭಾವಗಳು ಮತ್ತು ಒಬ್ಬ ವ್ಯಕ್ತಿಯ ಖಾಸಗಿ ಸಾಮಾಜಿಕ ಇರುವಿಕೆಗೆ ಸಂಬಂಧಿಸಿದ ಹಾಗೂ ತನ್ನ ಕುಟುಂಬದೊಂದಿಗಿನ ಸಂಬಂಧ, ವೈಯುಕ್ತಿಕ ನಿಲುವುಗಳು, ನಡವಳಿಕೆಗಳು ಇತ್ಯಾದಿಗಳನ್ನು ಕುರಿತದ್ದಾಗಿರುತ್ತದೆ.

ಇದರಲ್ಲಿ ಸರಿ ಅಥವಾ ತಪ್ಪು ಎಂಬುದೇನೂ ಇಲ್ಲ. ಬಹುಶಃ ಇದು ಸಂಪೂರ್ಣ ಮಾನವೀಯ ವಿಚಾರವೇ ಹೊರತು ಉಳಿದೆಲ್ಲಾ ಗುರಿ ಆಧಾರಿತ ಮತ್ತು ಸ್ಪಷ್ಟ.